# ವಿಜ್ಞಾನಿಗಳೂ ಮನುಷ್ಯರೇ!





**ವಿಶ್ವವಿಖ್ಯಾತ ವಿಜ್ಞಾನಿಗಳ ಹೃದಯ ಶ್ರೀಮಂತಿಕೆಯನ್ನೂ ಕ್ಷುಲ್ಲಕತನವನ್ನೂ ಬಿಂಬಿಸುವ ಸ್ವಾರಸ್ಯಕರ ಘಟನೆಗಳು ಇಲ್ಲಿವೆ. ಮಹತ್ತರ ಸಾಧನೆಯ ನಂತರವೂ ವಿಜ್ಞಾನಿಗಳೂ ಎಲ್ಲರಂತೆ ಮನುಷ್ಯರು ಎನ್ನುವುದಕ್ಕೆ ಈ ಘಟನೆಗಳು ಉದಾಹರಣೆಯಂತಿವೆ. ಈ ಪ್ರಸಂಗಗಳ ಮೂಲಕ ಫೆ. 28ರ 'ರಾಷ್ಟ್ರೀಯ ವಿಜ್ಞಾನ ದಿನ'ದ ಸಂದರ್ಭದಲ್ಲಿ ಸುಪ್ರಸಿದ್ಧ ವಿಜ್ಞಾನಿಗಳನ್ನು 'ಸುಧಾ' ತನ್ನ ಓದುಗರಿಗೆ ಮತ್ತೆ ನೆನಪಿಸುತ್ತಿದೆ.**

**■ ಗುರುರಾಜ್ ಎಸ್. ದಾವಣಗೆರೆ**

ವಿಜ್ಞಾನವೆಂದರೆ ಸುತ್ತಲಿನ ಜಗತ್ತನ್ನು ನಿರಂತರವಾಗಿ ಗಮನಿಸುವುದು ಮತ್ತು ಅದು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಪ್ರಯೋಗಗಳ ಮೂಲಕ ಅರ್ಥಮಾಡಿಕೊಳ್ಳುವುದು. ವಿಶ್ವದ ಅನೇಕ ವಿದ್ಯಮಾನಗಳ ಕುರಿತು ಸದಾ ಕುತೂಹಲ ಮತ್ತು ತಿಳಿವಳಿಕೆ ಹೊಂದಿ, ನಡೆಯುವ ಪ್ರತಿಯೊಂದೂ ಕ್ರಿಯೆಯನ್ನು ಪ್ರಯೋಗಗಳ ಮೂಲಕ ವಿಶ್ಲೇಷಿಸಿ, ಪರೀಕ್ಷಿಸಿ, ಸಿಗುವ ಉತ್ತರವನ್ನು ಸಿದ್ಧಾಂತವೆಂದು ಮಂಡಿಸಿ, ಇತರರಿಗೂ ಅದನ್ನು ತೋರಿಸುವ ವ್ಯಕ್ತಿಯನ್ನು ವಿಜ್ಞಾನಿ ಎನ್ನುತ್ತೇವೆ. ಪ್ರಕೃತಿಯಲ್ಲಿರುವುದನ್ನೇ ಹೆಕ್ಕಿ ತೆಗೆದು ಇದು ಹೀಗೆ, ಹಾಗಲ್ಲ ಎಂದು ಕರಾರುವಕ್ಕಾಗಿ ನಿರೂಪಿಸಿದ ಅನೇಕ ಮಹಾನ್ ವಿಜ್ಞಾನಿಗಳು ಈಗಾಗಲೇ ಆಗಿಹೋಗಿದ್ದಾರೆ. ಸಾಮಾನ್ಯ ಮನುಷ್ಯನ ತಿಳಿವಳಿಕೆಯ ಆಳ—ಎತ್ತರಗಳಿಗೆ ನಿಲುಕದ ಅನೇಕ ಪ್ರಯೋಗ ಮಾಡಿದ ಬಹುತೇಕ ವಿಜ್ಞಾನಿಗಳು ಕೆಲವೊಮ್ಮೆ ಸಾಮಾನ್ಯರಂತೆ, ಅಸಾಮಾನ್ಯರಂತೆ, ಉದಾತ್ತರಂತೆ ಮತ್ತು ಕೆಲವೊಮ್ಮೆ ನಿಕೃಷ್ಟರಂತೆ ವರ್ತಿಸಿದ್ದೂ ಇದೆ. ಇದಕ್ಕೆ ನಮ್ಮವರು, ಹೊರಗಿನವರು ಎಂಬ ಭೇದವೇನಿಲ್ಲ. ಅಂತಹ ಹಲವು ಪ್ರಸಂಗಗಳು ಇಲ್ಲಿವೆ ನೋಡಿ!